# ಕುವೆಂಪುರ ನಾಟಕಗಳಲ್ಲಿ ಸಂಘರ್ಷದ ಹುಡುಕಾಟ

**ಡಾ.ಹೆಚ್.ಮಲ್ಲಿಕಾರ್ಜುನ**
**ಮುಖ್ಯಸ್ಥರು**
**ಕನ್ನಡ ಅಧ್ಯಯನ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೋಕ.**

ಕನ್ನಡ ಸಾಹಿತ್ಯದ ನಾಯಕ ನಾಟಕವು ಮಹತ್ವದ ಪ್ರಕಾರವಾಗಿದೆ. ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ಆತ್ಮಕಥನ, ಇನ್ನು ಮೊದಲಾದವುಗಳಿಗಿಂತ ಭಿನ್ನವಾದ ವಿಶಿಷ್ಟವಾದ ಸಾಹಿತ್ಯ ಪ್ರಕಾರವಾಗಿದೆ. ಕಾಲಘಟ್ಟಕ್ಕೆ ತಕ್ಕಂತಹ ವಸ್ತುಗಳನ್ನು ಹೊಂದುತ್ತ, ಸಾಮಾಜಿಕ ಬದಲಾವಣೆಯನ್ನುಂಟುಮಾಡುವ ನಿಟ್ಟಿನಲ್ಲಿ ನಾಟಕವು ಅಗಾಧವಾದ ಪಾತ್ರವನ್ನು ನಿರ್ವಹಿಸಿವೆ. ಪುರಾಣ ಪುರುಷರ ಕಥೆಗಳಿಂದ ಮೊದಲ್ಗೊಂಡು ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಆಧುನಿಕ ಕನ್ನಡ ನಾಟಕಗಳು ಮಹತ್ವವನ್ನು ಪಡೆದುಕೊಂಡಿವೆ. ಪಾಶ್ಚಾತ್ಯ ಸಾಹಿತ್ಯ, ಶಿಕ್ಷಣ, ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಏರು–ಪೇರು, ಪ್ರಗತಿಪರ ವಾಸ್ತವವಾದಿ ಧೋರಣೆ, ಇವೇ ಮೊದಲಾದ ಅಂಶಗಳು ಸಾಹಿತ್ಯದಲ್ಲಿ ಹೊಸ ಬದಲಾವಣೆಯನ್ನುಂಟುಮಾಡಿದವು. ಸಮಾಜ ಮತ್ತು ವ್ಯಕ್ತಿ ವಿಷಯಗಳು ಆಧುನಿಕ ಸಾಹಿತ್ಯದಲ್ಲಿ ಚರ್ಚೆಗೆ ಯೋಗ್ಯವಾದ ವಿಷಯಗಳಾದವು. ಈ ನಿಟ್ಟಿನಲ್ಲಿ ಸಾಮಾಜಿಕ ನಾಟಕಗಳು ಸಾಮಾನ್ಯ ಜನರ ಬದುಕಿಗೆ ಸ್ಪಂದಿಸಿದವು. ಸಮಾಜದಲ್ಲಿ ಕಂಡುಬರುವ ಜಟಿಲ ಸಮಸ್ಯೆಗಳನ್ನು ವಿವೇಚಿಸಿ ಸಾಧ್ಯವಾದಲ್ಲಿ ಆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಸಾಮಾಜಿಕ ನಾಟಕಗಳ ಪ್ರಧಾನ ಉದ್ದೇಶವಾಗಿದೆ. ವಸ್ತು ಯಾವ ಮೂಲದ್ದೇ ಆದರೂ ಅದನ್ನು ಸಮಕಾಲೀನ ಸಮಾಜದ ಸ್ಥಿತಿಗತಿಗೆ ತಕ್ಕಂತೆ ಮಾರ್ಪಡಿಸಿ, ಕನ್ನಡ ನಾಟಕಕಾರರು ಬದಲಾವಣೆಯನ್ನು ಕಂಡುಕೊಂಡು ವಿಶಿಷ್ಟ ಸಾಧನೆ ಮೆರೆದಿದ್ದಾರೆ. ಅವರಲ್ಲಿ ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟ ಪ್ರತಿಭೆ ಕುವೆಂಪು.

ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕುವೆಂಪುರವರ ವೈಚಾರಿಕತೆಯ ನಿಲುವನ್ನು ತಿಳಿಯಬಹುದಾಗಿದೆ. ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳೆಂದು ಒಟ್ಟು ಹದಿನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಅವರು ನಾಟಕಗಳಲ್ಲಿ ಸಾಮಾಜಿಕ ವಿಮರ್ಶೆಯನ್ನು ವಿಡಂಬನಾತ್ಮಕವಾಗಿ ರಚಿಸಿದ್ದಾರೆ. ಸಮಕಾಲೀನ, ಪರಂಪರಾಗತ ಪೂರ್ವಕಾಲೀನ ಸಂಗತಿಗಳಾಗಿ ಸಾಮಾಜಿಕತೆ ಹಾಗೂ ಆಧ್ಯಾತ್ಮಿಕತೆಗಳ ಸಾಮರಸ್ಯದಿಂದ ಅವರದೇ ಆದ ವಿಶಿಷ್ಟ ರೀತಿಯಿಂದ ನಾಟಕ ರೂಪಗಳಲ್ಲಿ ಪ್ರಸ್ತುತ ಪಡಿಸಿದ್ದಾರೆ. ಅವರ ನಾಟಕಗಳ ಆಶಯವು ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳಿಗೆ ನೀಡಿದ ಪ್ರತಿಕ್ರಿಯೆಗಳಾಗಿವೆ. ಸಮಾಜದ ಕುರಿತಾಗಿ ಚಿಂತಿಸುವ ಸಾಹಿತಿಯು ಸಾಮಾಜಿಕ ಅನ್ಯಾಯಗಳನ್ನು ಗುರುತಿಸಿ, ಅವುಗಳ ವಿರುದ್ಧ ಆಕ್ರೋಶ, ಪ್ರತಿಭಟನೆ ತೋರುವುದು ಸಹಜವಾದುದು. ಸಮಕಾಲೀನ ಜನತೆಯ ಮೌಲ್ಯಗಳೂ, ಆತಂಕಗಳು, ನಲಿವು, ಮಿತಿಗಳು ಮುಂತಾದ ಅಂಶಗಳ ಜೊತೆಗೆ ಬದುಕಿನಲ್ಲಿ ಲೀನವಾಗಿರುವ ಸಾರ್ವಕಾಲಿಕ ಮೌಲ್ಯಗಳನ್ನು ಅರ್ಥಮಾಡಿಕೊಂಡು ಕೃತಿಗಳ ಮೂಲಕ ಬಿಂಬಿಸುವುದಾಗಿದೆ. ಈ ನಿಟ್ಟಿನಲ್ಲಿ ಕುವೆಂಪುರವರ 'ಜಲಗಾರ', 'ಶೂದ್ರತಪಸ್ವಿ', 'ಬೆರಳ್ ಗೆ ಕೊರಳ್', ನಾಟಕಗಳು ಸಾಮಾಜಿಕ ವಸ್ತುವನ್ನೊಳಗೊಂಡ ನಾಟಕಗಳಾಗಿವೆ. ಸಮಾಜದಲ್ಲಿಯ ವರ್ಗ–ವರ್ಣ ಸಂಘರ್ಷಗಳನ್ನು ಪ್ರಸ್ತುತ ಪಡಿಸುತ್ತವೆ. 'ಜಲಗಾರ' ನಾಟಕವು ಎರಡು ದೃಶ್ಯಗಳಿಗೆ ಸೀಮಿತವಾದ ವ್ಯಾಪ್ತಿಯನ್ನು ಹೊಂದಿದೆ.

ದೇವಸ್ಥಾನವನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ನಾಟಕವನ್ನು ರಚಿಸಿದ್ದಾರೆ. ಈ ನಾಟಕದ ವಸ್ತು ದಲಿತರ ವೃತ್ತಿನಿಷ್ಠೆ, ಬೌದ್ಧಿಕತೆ, ಆಧ್ಯಾತ್ಮಿಕತೆಗಳ ಅಂಶಗಳನ್ನು ಒಳಗೊಂಡಿದೆ. 'ಜಲಗಾರ' ವೃತ್ತಿಯಿಂದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ಥಾನದಲ್ಲಿದ್ದರೂ ಅವರ ತಿಳುವಳಿಕೆ, ಹೃದಯವಂತಿಕೆ, ಕಾಯಕನಿಷ್ಠೆ ಮುಂತಾದ ಆಚರಣೆಗಳಿಂದ ಕೂಡಿದೆ. ಸಮಾಜದ ಅವ್ಯವಸ್ಥೆಗಳನ್ನು ಕುವೆಂಪು ಚಿಕಿತ್ಸಕ ದೃಷ್ಟಿಯಿಂದ ಗಮನಿಸುತ್ತಾರೆ. ಅಸ್ಪೃಶ್ಯ ಜಲಗಾರನೊಬ್ಬ ಬೀದಿ ಕಸ ಗುಡಿಸುವ ಕಾಯಕದಿಂದ ನಾಟಕವು ಆರಂಭವಾಗಿದೆ. ಶಿವಗುಡಿಯ ಜಾತ್ರೆಗೆ ಈತನನ್ನು ಆಹ್ವಾನಿಸುವ ರೈತನಿಗೆ, ಜಲಗಾರನಿಗೆ ಅಲ್ಲಿ ಪ್ರವೇಶವಿಲ್ಲ ಎಂದು ಗೊತ್ತಿದ್ದರೂ ಆಹ್ವಾನಿಸುವ ರೀತಿ ನಾಟಕೀಯವಾಗಿದೆ. ಆತ ಹಿಂದೆ ಆದ ಕಹಿ ಘಟನೆಗಳನ್ನು ಸ್ಮರಿಸಿಕೊಳ್ಳುತ್ತಾನೆ. ದೇವಾಲಯದ ಒಳಗೆ ಹೋದ ತನ್ನ ಮಗನನ್ನು ಬೈದು ನೂಕಿದುದನ್ನು ನೆನಪಿಸಿಕೊಳ್ಳುತ್ತಾನೆ. ರೈತನಿಗೆ ನೀಡುವ ಉತ್ತರದಲ್ಲಿ

ಅವನ ಅರಿವು ಪರಮನೆಲೆ ಮುಟ್ಟಿರುವ ಸಿದ್ಧಿಯ ದ್ಯೋತಕವಾಗಿದೆ. ಅಂತೆಯೇ ವಿಡಂಬನಾತ್ಮಕವಾಗಿ ಸಮಾಜದ ಪ್ರಸ್ತುತ ಪರಿಸ್ಥಿತಿಯನ್ನು ಹೆಣೆದಿದ್ದಾರೆ. 'ಕರ್ಮವಾರಾಧನೆ, ಸೇವೆಯೇ ಪೂಜೆ ನನ್ನ ಭಾಗಕೆ ಪೊರಕೆ ಆರತಿ, ಗುಡಿಸುವುದೇ ನನ್ನ ದೇವರ ಪೂಜೆ! ನಿನ್ನೆ ದೇಗುಲದೆಡೆಗೆ ಹೋದೆನ್ನ ಕಂದನಂ ಬೈದಿರಿದು ನೂಕಿದರು' ಅಸ್ಪೃಶ್ಯರ ಸ್ಥಿತಿಯನ್ನು ಏನನ್ನೂ ಅರಿಯದ ಮುಗ್ಧ ಬಾಲಕನ ಮೂಲಕ ಚಿತ್ರಿಸುತ್ತಾರೆ. ಬ್ರಾಹ್ಮಣ ವರ್ಗದ ಅಂಧ ಸಂಪ್ರದಾಯ, ಪುರೋಹಿತ ಶೋಷಣೆ, ಮತೀಯ ಮೇಲು–ಕೀಳುಗಳು, ಕೆಳವರ್ಗದ ಅಂಧಾಚಾರ ಕೀಳರಿಮೆಗಳ ಹಿನ್ನಲೆಯಲ್ಲಿ ಕುವೆಂಪುರವರ ಸಮಾಜ ವಿಮರ್ಶೆ ವಿಶಾಲತೆಯನ್ನು ಪಡೆದಿದೆ. ಇಲ್ಲಿ ಜಲಗಾರ ಕಾಯಕ ಯೋಗಿಯಾಗಿದ್ದಾನೆ. ಕಾಯಕ ತತ್ವ್ವವನ್ನು ಬೋಧಿಸುವುದರ ಜೊತೆಗೆ ಆಧ್ಯಾತ್ಮದೆತ್ತರಕ್ಕೂ ತನ್ನ ಅರಿವನ್ನು ವಿಸ್ತರಿಸಿಕೊಂಡಿದ್ದ ಮಹಾನ್ ಸಾಧಕನಾಗಿದ್ದಾನೆ. ಪೂಜೆಯ ನಿಜವಾದ ಅರ್ಥವನ್ನು ಈ ಪಾತ್ರದ ಮೂಲಕ ಕಂಡುಕೊಳ್ಳುತ್ತ ಸಂಪ್ರದಾಯದ ಕ್ರೌರ್ಯವನ್ನು ಕುವೆಂಪು ಟೀಕಿಸುತ್ತಾರೆ.

ವೈದಿಕರ ನಿರರ್ಥಕ ಆಚರಣೆಯನ್ನು ಬಯಲಿಗೆಳೆಯುತ್ತಾರೆ. 'ಶಿವಗುಡಿಯ ಶಿವನು ಜೋಯಿಸರ ಶಿವನಂತೆ; ನನ್ನ ಶಿವನೇ ಮಣ್ಣಿನಲ್ಲಿಹನು, ನನ್ನ ಶಿವ ಕೊಳೆತ ಕಸ ದೊಳಿಹನು---------- ---------------------- ---------------------- ನನ್ನದೆಯ ದೇಗುಲ; ನನ್ನೊಲ್ಮೆಯದೇ ಪೂಜ" ಎನ್ನುವಲ್ಲಿ ಬಾಹ್ಯಾಡಂಬರ ಪೂಜೆಯನ್ನು ನಿರಾಕರಿಸಿ, ಕಾಯಕ ಶುದ್ಧಿಯನ್ನು ಪ್ರತಿಪಾದಿಸಿದ್ದಾರೆ. ಜಗದಲ್ಲಿ ಕಾಯಕವೇ ಶ್ರೇಷ್ಠವಾದುದು. ಶಿವನ ಗುಡಿಯಲ್ಲಿ ಶಿವನ ಮುಂದೆ ಕಾಯಕ ಮಾಡದೇ ಸುಮ್ಮನೆ ನಿಂತರೆ ಸಾಲದು. ತನ್ನ ಕಾಯಕ ಯಾವುದೇ ಇರಲಿ, ಕಸ ಗುಡಿಸುವ ಜಲಗಾರನಾದರೂ, ಆತನು 'ಕಾಯಕ ಬದ್ಧನಾಗಿದ್ದರೆ ಮಾತ್ರ ಜೀವಿಗಳ ಉದ್ಧಾರ ಸಾಧ್ಯ' ಎಂಬ ಜೀವನ ಮೌಲ್ಯಗಳ ಅರಿವು ಇಲ್ಲಿದೆ. ಮೇಲ್ಜಾತಿ ಮತ್ತು ಮೇಲ್ವರ್ಗದವರಿಂದ ತಿರಸ್ಕಾರಕ್ಕೆ ಗುರಿಯಾದ ಊರ ಜಲಗಾರ ಕರ್ಮಯೋಗಿಯಾಗಿ ಜಗದ ಜಲಗಾರನಲ್ಲಿ, ಶಿವತ್ವದಲ್ಲಿ ಶ್ರೇಷ್ಠತೆಯನ್ನು ಸಾಧಿಸಿದ ಕಥೆಯನ್ನು ಈ ನಾಟಕ ತಿಳಿಸುತ್ತದೆ. ಸಮಾಜದ ಸಾಮಾಜಿಕ ಅಮಾನವೀಯ ಆಚರಣೆಯಾದ ಅಸ್ಪೃಶ್ಯತೆಯನ್ನು, ಕಾಯಕನಿಷ್ಠೆಯಿಂದ ಶಿವನನ್ನು ಒಲಿಸಿಕೊಳ್ಳುವ ಪರಿಶುದ್ಧ ಮನದ ಭಕ್ತಿಗೆ ಕುವೆಂಪು ನಾಟಕವು ನಿದರ್ಶನವಾಗಿದೆ. ಪುರೋಹಿತಶಾಹಿ, ದೇವರು, ಧರ್ಮವನ್ನು ಜಲಗಾರನು ತಿರಸ್ಕರಿಸುತ್ತಾನೆ. ಬಾಹ್ಯಾಡಂಬರದ ಪೂಜೆಯನ್ನು ತಿರಸ್ಕರಿಸುವ ಅವನಲ್ಲಿ ವಾಸ್ತವತೆಯ ನಿಲುವನ್ನು ಗಮನಿಸಬಹುದಾಗಿದೆ. ದೇವಾಲಯದ ಸಮೀಪ ಬಂದ ಬ್ರಾಹ್ಮಣರಿಗೆ ಸುಮಧುರವಾದ ದನಿಯೊಂದು ಕೇಳಿಬರುತ್ತದೆ. ಮೋಹಕ ರಾಗಕ್ಕೆ ಮೆಚ್ಚಿ, ಯಾರೋ ದಿವ್ಯಾತ್ಮರಿರಬೇಕೆಂದು ತಿಳಿದು, ಯಾರೆಂದು ಪ್ರಶ್ನಿಸುತ್ತಾರೆ. ಹಾಡಿದವನು ಜಲಗಾರ ಎಂದು ತಿಳಿದಾಗ, ವ್ಯಂಗ್ಯದ ಮಾತುಗಳನ್ನಾಡುತ್ತಾರೆ. 'ಶೂದ್ರರೊಳ್ ಕವಿವರ್ಯರುದಿಸುವರೇ? ಹುಟ್ಟುವರೇ ಪಂಡಿತರ್? ಜನಿಸುವರೇ ಶಿಲ್ಪಿಗಳ್? ಗಾಯಕರ್? ಯೋಗಿಗಳ್? ಅಸದಳಂ! ಎನ್ನುವಲ್ಲಿ ಹಾಡಿದವನ ಬಗ್ಗೆ 'ಸಂಗೀತವೇನು ಮನಮೋಹಕವಾಗಿರಲಿಲ್ಲ, ಸಂಗೀತ ಸರಸ್ವತಿಯು ಹೀನ ಜಲಗಾರನಿಗೆ ಒಲಿಯುವಳೇ?' ಎಂದು ವ್ಯಂಗ್ಯಮಾಡುತ್ತಾರೆ. ಬ್ರಾಹ್ಮಣರು ಉತ್ತಮ ಹುದ್ದೆಗಳಿಗೆ ತಾವೇ ವಾರಸುದಾರರು,

ಅಧಿಪತಿಗಳು ಎಂದು ಹೇಳಿಕೊಳ್ಳುವುದರ ಜೊತೆಗೆ 'ಪ್ರತಿಭೆ' ಎನ್ನುವುದು ವ್ಯಕ್ತಿಯಲ್ಲಿ ಬರಬೇಕಾದರೆ ಆತ ಉತ್ತಮ ಜಾತಿಯಲ್ಲಿ ಜನಿಸಿರಬೇಕಾಗುತ್ತದೆ ಎಂಬ ಸಂಕುಚಿತ ಮನೋಭಾವದವರಾಗಿದ್ದಾರೆ. ಅಂಥವರಿಗೆ ಕುವೆಂಪುರವರು ನಾಟಕದ ಮೂಲಕ ಉತ್ತರಿಸುತ್ತಾರೆ. ಸೃಷ್ಟಿಯಲ್ಲಿ ಯಾರೂ ಮೇಲು–ಕೀಳು ಅಲ್ಲ, ಎಲ್ಲರೂ ಸಮಾನರು. ಪ್ರತಿಭೆಗೆ ಜಾತಿ– ಮತಧರ್ಮಗಳ ಎಲ್ಲೆಯಿಲ್ಲ, ಎಲ್ಲವನ್ನೂ ಮೀರಿ ನಿಂತದ್ದೇ 'ಪ್ರತಿಭೆ' ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಪ್ರತಿಭಾ ಫಲದಿಂದ ಊರ ಜಲಗಾರನು ಜಗದ ಜಲಗಾರನಾಗಬಹುದು ಎಂಬ ಅಂಶವನ್ನು ಈ ನಾಟಕದ ಮೂಲಕ ಸ್ಪಷ್ಟಪಡಿಸುತ್ತಾರೆ. ಹೀಗೆ ಮೇಲ್ಜಾತಿಯವರು ಕೆಳಜಾತಿಯವರನ್ನು ಮೂದಲಿಸುತ್ತಾ ಗರ್ವದಿಂದ ಮೆರೆಯುತ್ತಿದ್ದಾರೆ. ಅವರ ಗರ್ವಭಂಗಕ್ಕಾಗಿ ಜಗದೊಡೆಯನಾದ ಶಿವನೇ ಜಗದ ಜಲಗಾರನಾಗಿ ಕುವೆಂಪು ನಾಟಕದಲ್ಲಿ ಬರುತ್ತಾನೆ. ಜಾತ್ರೆ, ದೇವಸ್ಥಾನ, ಪುರೋಹಿತ ವರ್ಗ ಇವೆಲ್ಲವೂ ವಂಚನೆಯ ಆಗರಗಳಾಗಿವೆ. ಶಿವನು ಪ್ರಾಮಾಣಿಕ ಸೇವೆಯಲ್ಲಿ ಕಾಯಕನಿಷ್ಠೆಯಲ್ಲಿ ಮಾತ್ರ ಇರುವನು ಎಂಬ ಶಾಶ್ವತ ಸತ್ಯ ಪ್ರತಿಪಾದನೆ ಮೂಡಿ ಬಂದಿದೆ. ಶಿವನು ತಾನು ನೆಲೆಯಾಗಿರುವ ಸ್ಥಾನವನ್ನು ತಿಳಿಸಿಕೊಡುತ್ತಾನೆ. ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ ಊಳುತಿರುವ ಒಕ್ಕಲಿಗನೆದೆಯಲಿ ನಾನಿರುವೆ ಎಲ್ಲಿ ಹೊಲಿಯನು ತನ್ನ ಕಾರ್ಯದಲ್ಲಿ ತೊಡಗಿಹನೊ ಅಲ್ಲಿ ನಾನವನ ಪಕ್ಕದೊಳಿರುವೆ, ಕುಂಟರನು ಕುರುಡರನು, ದೀನರನು, ಅನಾಥರನು ಕೈ ಹಿಡಿದು ಪೊರೆಯುತಿಹನೆಡೆಯಿರುವೆ....................... ಎನ್ನುವಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆಗೆ ದೈವದ ಸಾನ್ನಿಧ್ಯ ಸಾಧ್ಯ ಎನ್ನುತಾ್ತರೆ. ಆ ಮೂಲಕವಾಗಿ ಡಾಂಭಿಕತೆಯ ಮುಖವಾಡವನ್ನು ಬಯಲಿಗೆಳೆಯುತ್ತಾರೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ

ಸ್ಥಿತ್ಯಂತರಗಳ ಈ ಕಾಲಘಟ್ಟವು ಕುವೆಂಪುರವರ ಸಾಹಿತ್ಯ ಸೃಷ್ಟಿಗೆ ಪ್ರೇರಕವೂ, ಪೋಷಕವೂ ಆಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇಂದಿಗೂ ಜಾರಿಯಲ್ಲಿರುವ ಅಸ್ಪೃಶ್ಯತೆ, ಆಡಂಬರ, ಅನ್ಯಾಯಗಳು, ಜೀವನ ಶೋಷಣೆಗಳು ಸಮಾಜದ ವಿಷಮತೆಯ ಮೂಲವೆಂಬುದನ್ನು 'ಶೂದ್ರತಪಸ್ವಿ' ನಾಟಕವು ಪ್ರಸ್ತುತ ಪಡಿಸುತ್ತದೆ. ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲುಮಾಡಿ ಧರ್ಮ, ಜಾತಿ, ಪುರೋಹಿತಶಾಹಿ, ಮೊದಲಾದ ಸ್ಥಾಪಿತ ಅಧಿಕಾರ ಕೇಂದ್ರಗಳನ್ನು ಪಲ್ಲಟಗೊಳಿಸುವ ಇಂದಿನ ಸಮಕಾಲೀನ ಸಂದರ್ಭವನ್ನು 'ಶೂದ್ರತಪಸ್ವಿ' ನಾಟಕವು ಹಿಡಿದಿಡುತ್ತದೆ.

ರಾಜಪ್ರಭುತ್ವ–ಪುರೋಹಿತಶಾಹಿ ಯಜಮಾನ್ಯತನದ ನಡುವಿನ ಮುಖಾಮುಖಿ, ಬ್ರಾಹ್ಮಣ–ಶೂದ್ರತ್ವದ ನಡುವಿನ ಸಂಘರ್ಷಗಳನ್ನು ಶೋಧಿಸುತ್ತದೆ. ಜಾತಿ ಸಂಘರ್ಷಗಳನ್ನು ಪರಿಹರಿಸಿ, ಮೌಲ್ಯಾಧಾರಿತ ಆದರ್ಶ ಸಮಾಜವನ್ನು ಕಟ್ಟುವ ಮೂಲಕ ಶೂದ್ರ ಶಕ್ತಿಯನ್ನು ಪ್ರಸ್ತುತ ಪಡಿಸುವುದು ಈ ನಾಟಕದ ಆಶಯವಾಗಿದೆ. ಶಂಭೂಕನು ಕೈಗೊಂಡ ತಪಸ್ಸಿನಿಂದಲೇ ತನ್ನ ಮಗ ಸತ್ತ ಎಂದು ತಿಳಿದು ಅವನನ್ನು ಕೊಲ್ಲಲು ಒಬ್ಬ ಬ್ರಾಹ್ಮಣ ರಾಮನನ್ನು ಕರೆದುಕೊಂಡು ಹೋಗುವುದು ಪೌರಾಣಿಕ ಕಥೆಯಾಗಿದೆ. ಅದೇ ಕಥಾವಸ್ತುವನ್ನಿಟ್ಟುಕೊಂಡು ಶೂದ್ರತಪಸ್ವಿ ನಾಟಕದಲ್ಲಿ ಶೋಧನಾ ತತ್ವವನ್ನಳವಡಿಸಿದ್ದಾರೆ. ಬ್ರಾಹ್ಮಣನ ಅವಿವೇಕಿತನ ಹಾಗೂ ರಾಮನು ಅದನ್ನು ತಿದ್ದಿದ ರೀತಿ ಇಲ್ಲಿ ಚಿತ್ರಿತಗೊಂಡಿದೆ. ಬ್ರಾಹ್ಮಣನ ಮಾತಿಗೆ ಒಪ್ಪಿ ಬಂದ ರಾಮನು, ತಪಸ್ವಿಯ ಮಹಿಮೆಗೆ, ಭಕ್ತಿಗೆ ಮನಸೋತು ಮನದಲ್ಲಿಯೇ ವಂದಿಸುತ್ತಾನೆ. ಬ್ರಾಹ್ಮಣನ ಒತ್ತಡಕ್ಕೆ ಮಣಿದ ರಾಮ ಬ್ರಹ್ಮಾಸ್ತ್ರವನ್ನು ಹೂಡಿ 'ಅರಸಿ ಕೊಲ್ ಅರಗುಲಿಯನ್' ಎಂದು ಬಾಣ ಪ್ರಯೋಗಿಸುತ್ತಾನೆ. ಬಾಣವು ತಪಸ್ವಿಗೆ ಪ್ರದಕ್ಷಿಣೆ ಹಾಕಿ ಬ್ರಾಹ್ಮಣನನ್ನು ಅಟ್ಟಿಸಿಕೊಂಡು ಬರುತ್ತದೆ. ನಂತರದಲ್ಲಿ ರಾಮನ ನಿರ್ದೇಶನದಂತೆ ಬ್ರಾಹ್ಮಣ ತಪಸ್ವಿಯ ಕಾಲಿಗೆ ಬಿದ್ದು ನಮಸ್ಕರಿಸಿ ಕ್ಷಮೆ ಪಡೆಯುತ್ತಾನೆ. ಪ್ರಾಯಶ್ಚಿತವನ್ನು ಹೊಂದಿ ತಾನು ಬದುಕಿ ಮಗನನ್ನು ಉಳಿಸಿಕೊಳ್ಳುತ್ತಾನೆ. ಪುರಾಣದ ರಾಮ ಹಾಗೂ ಕುವೆಂಪು ರಾಮನಿಗೆ ಬಹಳಷ್ಟು ವ್ಯತ್ಯಾಸಗಳಿವೆ. ಬ್ರಾಹ್ಮಣನ ಮನಃಪರಿವರ್ತನೆ, ಶೂದ್ರ ಶಕ್ತಿಯ ಅನಾವರಣ ಈ ನಾಟಕದ ಉದ್ದೇಶದಂತೆ ಕಂಡುಬರುತ್ತದೆ. ಎಲ್ಲ ಜಾತೀಯ ಧರ್ಮೀಯರನ್ನು ಸಮಾನತೆಯಿಂದ ಕಾಣುವ ಹಾಗೂ ಸಮಾಜದಲ್ಲಿಯ ಆಂತರಿಕ ಬಿಕ್ಕಟ್ಟುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ರಾಮನ ಪಾತ್ರವನ್ನು ಚಿತ್ರಿಸಿದ್ದಾರೆ. ಸಾಮಾಜಿಕ ಅಸಮಾನತೆ, ಏರು–ಪೇರುಗಳು ಸಮಾಜವನ್ನು ವಿಭಾಗಿಸಿದ ಅಂಶಗಳ ಕಡೆಗೆ ಗಮನ ಹರಿಸುತ್ತ, ಸರ್ವರಿಗೂ ಸಮಬಾಳು ಎಂಬ ಅಂಶವನ್ನು ಈ ನಾಟಕದ ಮೂಲಕ ಪ್ರಸ್ತುತಪಡಿಸುತ್ತಾರೆ.

ಕುವೆಂಪುರವರ ಸೃಜನಶೀಲತೆಗೆ, ಪ್ರತಿಭೆಗೆ 'ಬೆರಳ್ ಗೆ ಕೊರಳ್' ನಾಟಕವು ಸಾಕ್ಷಿಯಾಗಿದೆ. ಪುರಾಣ ಸ್ವರೂಪದ ವಸ್ತುವನ್ನು ಕೃತಿಗೆ ಅಳವಡಿಸಿಕೊಂಡು ದುಡಿಸಿಕೊಳ್ಳುವ ರೀತಿ ವಿಶಿಷ್ಟವಾದುದು. ಮಹಾಭಾರತದಲ್ಲಿ ಬರುವ ಏಕಲವ್ಯನ ಕಥೆಯನ್ನಾಧರಿಸಿ ಕನ್ನಡದಲ್ಲಿ ಹಲವಾರು ನಾಟಕಗಳು ರಚಿತವಾಗಿವೆ. ಬೇಡನಾದ ಏಕಲವ್ಯ ಬಿಲ್ವಿದ್ಯೆ ಕಲಿಯಬೇಕೆಂಬ ಮಹಾದಾಸೆಯಿಂದ ಗುರುಗಳನ್ನು ಅರಸುತ್ತಾ ನಾಡಿಗೆ ಬರುತ್ತಾನೆ. ಅಲ್ಲಿ ಅರಸು ಮಕ್ಕಳಿಂದ ಅವಹೇಳನಕ್ಕೆ ಗುರಿಯಾಗಿ, ಕೊನೆಗೆ ಗುರುವಿನ ಪ್ರತಿಮೆಯನ್ನಿಟ್ಟುಕೊಂಡೇ ಸ್ವಸಾಮರ್ಥ್ಯದಿಂದ ವಿದ್ಯೆ ಕಲಿಯುತ್ತಾನೆ. ಇದನ್ನು ಸಹಿಸದ ಪ್ರಭುತ್ವ ಮತ್ತು ಪುರೋಹಿತಶಾಹೀ ಮನಸ್ಸುಗಳು ಗುರುಕಾಣಿಕೆಯ ನೆಪದಲ್ಲಿ ಏಕಲವ್ಯನ ಹೆಬ್ಬೆರಳನ್ನು ಗುರು ಕಾಣಿಕೆಯಾಗಿ ಪಡೆಯುವಂತೆ ಪ್ರೇರೆಪಿಸುತ್ತಾರೆ. ಕೆಳಜಾತಿ ಹಾಗೂ ಕೆಳವರ್ಗಗಳಿಗೆ ಜ್ಞಾನವನ್ನು ಹಂಚುವ ಸಂದರ್ಭ ಬಂದಾಗ ಸಮಾಜದಲ್ಲಿ ಪ್ರಭಾವೀ ವರ್ಗಗಳು ತಾರತಮ್ಯ ನೀತಿಯನ್ನು ಮುಂದುವರಿಸಿರುವುದನ್ನು ಪರೋಕ್ಷವಾಗಿ ಪ್ರತಿಬಿಂಬಿಸುತ್ತದೆ. ಪ್ರಾಚೀನ ಹಾಗೂ ಆಧುನಿಕ ಸಮಾಜಗಳೆರಡರಲ್ಲೂ ಉನ್ನತ ಅಧಿಕಾರ, ಉನ್ನತ ಜ್ಞಾನ, ಸ್ಥಾನಮಾನಗಳನ್ನು ಎಲ್ಲರಿಗೂ ಸಮಾನವಾಗಿ ಹಂಚದೇ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡಿರುವ ಕ್ರೂರ ವ್ಯವಸ್ಥೆಯ ಮೇಲೆ 'ಬೆರಳ್ ಗೆ ಕೊರಳ್' ನಾಟಕವು ಬೆಳಕು ಬೀರುತ್ತದೆ. ಪುರಾಣದ ಘಟನೆಗಳಿಗೆ ಹೋಲಿಸಿದರೆ ಈ ನಾಟಕವು ಸಾಕಷ್ಟು ಬದಲಾವಣೆಯನ್ನೊಳಗೊಂಡಿದೆ. ವಿದ್ಯೆ ಕಲಿಯಲು ಬಂದ ಏಕಲವ್ಯನಿಗೆ ದ್ರೋಣಾಚಾರ್ಯರು ತೋರುವ ಪ್ರೀತಿ, ಆದರ, ಅವಕಾಶಗಳು, ಅಶ್ವತ್ಥಾಮ – ಏಕಲವ್ಯರ ನಡುವಿನ ಸ್ನೇಹ ಮೊದಲಾದವುಗಳು ಕುವೆಂಪುರವರ ಸೃಷ್ಟಿಯಾಗಿವೆ.

"ಅಶ್ವತ್ಥಾಮ, ನಮ್ಮ ಚಟ್ಟರೊಳಿವನುರ್ವೊರ್ವನ್, ನಿನ್ನ ನೇರ್ಗಿರಿಯನೆಂದೀತನನ್ ಕಾಣ್" ಎಂದು ದ್ರೋಣಾಚಾರ್ಯರು ತಮ್ಮ ಶಿಷ್ಯರಿಗೆ ಹೇಳುತ್ತಾರೆ. ಸಂತೋಷದಿಂದ ವಿದ್ಯೆ ಕಲಿಸುತ್ತಾರೆ. ಈ ವಿಷಯಕ್ಕೆ ಅರಸು ಮಕ್ಕಳು ಒಪ್ಪದಿದ್ದಾಗ ಮನೆಯ ಆಳಾಗಿರಿಸಿಕೊಂಡು ವಿದ್ಯೆಯನ್ನು ಹೇಳಿಕೊಡುತ್ತಾರೆ. ಪ್ರಸ್ತುತ ಸನ್ನಿವೇಶದಲ್ಲಿ ಮನಸ್ಸುಗಳು ಪರಿವರ್ತನೆ ಹೊಂದಬೇಕಿರುವ ಅನಿವಾರ್ಯತೆಯನ್ನು ಈ ನಾಟಕದ ಮೂಲಕ

ಸೂಚಿಸುತ್ತಾರೆ. ಗುರುಗಳು ಎಲ್ಲ ರೀತಿಯಿಂದಲೂ ಏಕಲವ್ಯನನ್ನು ಪರೀಕ್ಷಿಸಿ ಶಿಷ್ಯನನ್ನಾಗಿ ಮನದಲ್ಲಿ ಸ್ವೀಕರಿಸುತ್ತಾರೆ. ಆದರೆ ಅರ್ಜುನನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ಗುರುದಕ್ಷಿಣೆ ಬೇಕೆಂದು ಏಕಲವ್ಯನಲ್ಲಿ ಕೇಳುತ್ತಾರೆ. ತಕ್ಷಣಕ್ಕೆ ಗುರುವಾಕ್ಯವನ್ನು ಪಾಲಿಸಿದ ಏಕಲವ್ಯ ಹಾಸುಬಂಡೆಯ ಮೇಲೆ ಕೈಯನ್ನಟ್ಟು ಹೆಬ್ಬೆರಳನ್ನು ಬಾಣದಿಂದ ಕತ್ತರಿಸಿ ಗುರುವಿಗೆ ಅರ್ಪಿಸುತ್ತಾನೆ. ಅದೇ ಸಮಯಕ್ಕೆ ಬಂದ ಏಕಲವ್ಯನ ತಾಯಿ ರಕ್ತಸಿಕ್ತವಾಗಿ ಬಿದ್ದಿರುವ ಹೆಬ್ಬೆರಳನ್ನು ಕಂಡು, ವ್ಯಥೆ ಪಡುತ್ತಾಳೆ. "ಆರ್‍ಗೊ ಬಲಿ ನನ್ನ ಕಂದನ ಬೆರಳ್ ಬಲಿಯಕ್ಕೆ ಆ ಪಾಪಿಯ ಕೊರಳ್" ಎಂದು ನೋವಿನಿಂದ ನುಡಿಯುತ್ತಾಳೆ. ಇದನ್ನು ಗಮನಿಸಿದ ಏಕಲವ್ಯ ಅವಳನ್ನು ಸಮಾಧಾನ ಪಡಿಸಿ ಮನೆಗೆ ಕಳಿಸಿಕೊಡುತ್ತಾನೆ. ಇಲ್ಲಿ ತನ್ನ ನೋವನ್ನು ಮರೆತು, ಇನ್ನೊಬ್ಬರ ಭಾವನೆಗಳಿಗೆ, ನೋವಿಗೆ ಸ್ಪಂದಿಸುವ ಗುಣಗಳೇ ತಳ ಸಮುದಾಯದವರ ಗುಣಗಳು, ಎಂದು ನಾಟಕಕಾರರು ಸೂಚಿಸುತ್ತಾರೆ.

ಅಮಾಯಕ ಏಕಲವ್ಯನ ಬಲಿಯಲ್ಲಿ ಸಾಮ್ರಾಜ್ಯಶಾಹಿಯ ಅಪಾಯ ಪ್ರವೃತ್ತಿ, ಗುರು ದ್ರೋಣಾಚಾರ್ಯರ ಅಪರಾಧಿ ನಿಲುವು, ಮುಂದೆ ತಮ್ಮ ಕೊರಳನ್ನೇ ದೊಡ್ಡ ಬೆಲೆಯಾಗಿ ತೆರಬೇಕಾದ ಭವಿಷ್ಯದ ದೃಷ್ಟಿಯುಳ್ಳ ಅಂಶಗಳ ನಿರೂಪಣೆಯಲ್ಲಿ ಕುವೆಂಪುರವರ ಸೃಜನಶೀಲತೆಯ ಅಂಶಗಳು ಗೋಚರಿಸುತ್ತದೆ. ಒಟ್ಟಾರೆಯಾಗಿ ಸಾಮಾಜಿಕ ಅನುಭವಗಳೇ ಕುವೆಂಪು ಕೃತಿಗಳಲ್ಲಿರುವ ವರ್ಣ ಸಂಘರ್ಷದ ಸ್ವರೂಪವನ್ನು ಪಡೆದು ತನ್ನ ಆಳದಲ್ಲಿ ನಿಯಂತ್ರಿಸಿರುವುದು ಕಂಡುಬರುತ್ತದೆ. ತಮ್ಮ ವಿಚಾರಗಳ ಅಭಿವ್ಯಕ್ತಿಯ ಮಾಧ್ಯಮವಾಗಿ ನಾಟಕ ಪ್ರಕಾರವನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ವರ್ಗ–ವರ್ಣ ಸಂಘರ್ಷ, ಸಮಕಾಲೀನ ಚಿಂತನೆ, ದ್ವಂದ್ವಗಳ ಮೂಲಕ ಕುವೆಂಪುರವರ ನಾಟಕಗಳು ವಿಶಿಷ್ಟ ವಿನ್ಯಾಸವನ್ನು ಪಡೆದುಕೊಂಡಿವೆ.

**ಆಧಾರ ಗ್ರಂಥಗಳು**

ಆಧುನಿಕ ಕನ್ನಡ ನಾಟಕ : ಡಾ.ಕೆ.ಮರುಳಸಿದ್ಧಪ್ಪ.

ಕನ್ನಡ ನಾಟಕ : ಡಾ.ಟಿ.ವೆಂಕಟೇಶ ಮೂರ್ತಿ.

ಕನ್ನಡ ನಾಟಕ : ತ.ಸು.ಶಾಮರಾಯ ರಸಋಷಿ.

ನಾಟಕ ಅಂತರಂಗ : ಎ.ಆರ್.ನಾಗಭೂಷಣ.

ಕುವೆಂಪು ಕುವೆಂಪು ಸಮಗ್ರ ನಾಟಕಗಳು : ಸಂ ಡಾ. ಕೆ. ಸಿ. ಶಿವಾರೆಡ್ಡಿ.